INDIAN JOURNAL OF HISTORY AND ARCHAEOLOGY
ISSN (e):2582-225Xwww.ijha.in
Vol-6, Issue -5, September--October, 2024,
PageNo,01- 07
Peer -Reviewed, Refereed Journal

# ನೂರ್ ಜಹಾನ್ ಅವರ ಬಹುಮುಖ ಪ್ರತಿಭೆಯ ಅನಾವರಣ –ಒಂದು ನೋಟ

ಉಮ್ಮೆಖುರ್ಷಿದ್.ದೊಡ್ಡಮನಿ.[1]

**ಸಂಕ್ಷಿಪ್ತ ಪರಿಚಯ** – ನೂರ್ ಜಹಾನ್ ಅವರ ಸಾಧನೆಯು ಜಗತ್ತಿನ ಚರಿತ್ರೆಯಲ್ಲಿಯೇ ನಂಬಲಾಗದಷ್ಟು ಸ್ಫೂರ್ತಿದಾಯಕವಾಗಿದೆ. ಏಕೆಂದರೆ, ನೂರ್ ಜಹಾನ್ ಅವರು ಮೊಘಲ್ ಭಾರತದ ರಾಜಕೀಯ ಇತಿಹಾಸದಲ್ಲಿ ಯಾವುದೇ ಒಬ್ಬ ಮಹಿಳೆಯು ತನ್ನ ಮೊದಲು ಅಥವಾ ಅನಂತರದಲ್ಲಿ ಎಂದಿಗೂ ನಿರೀಕ್ಷಿಸದೆ ಇರುವಂತಹ ಅಪಾರವಾ ಸಾಧನೆಯನ್ನು ಮಾಡಿದ್ದಾರೆ ಎಂಬುದು ಪ್ರಸ್ತುತ ಅಧ್ಯಯನದ ಮೂಲಕ ತಿಳಿದುಬರುತ್ತದೆ. ಬಹುಮುಖ್ಯವಾಗಿ ಇವರು ಮೊಘಲ್ ಚಕ್ರವರ್ತಿ ಜಹಾಂಗೀರನ 20ನೆಯ ಮತ್ತು ಅತ್ಯಂತ ಪ್ರೀತಿ ಪಾತ್ರವಾಗಿರುವ ಮಡದಿಯಾಗಿದ್ದವರು. ತದನಂತರ ಮೊಘಲ್ ಸಾಮ್ರಾಜ್ಯದ ಭಾರತದ ಆಳ್ವಿಕೆಯಲ್ಲಿ ಸಹಸಾರ್ವಭೌಮ ಆಡಳಿತಗಾರ್ತಿಯಾದ್ದವರು. ಇದೇ ನೂರ್ ಜಹಾನ್ ಅವರು ಚಕ್ರವರ್ತಿಯೊಂದಿಗಿನ ತನ್ನ ಮದುವೆಯ ಆರಂಭಿಕ ವರ್ಷಗಳಲ್ಲಿ ರಾಜಕೀಯವಾಗಿ ಚಾಣಾಕ್ಷ ಮೈತ್ರಿಗಳನ್ನು ಬೆಳೆಸಲು ಮತ್ತು ಅರಮನೆಯ ಜನಗಳೊಳಗೆ ರಾಜ್ಯದ ವ್ಯವಹಾರಗಳನ್ನು ಬಹುಸೂಕ್ಷ್ಮವಾಗಿ ಗಮನಿಸುವುದರಲ್ಲಿ ತನ್ನ ಸಮಯವನ್ನು ಹೇಗೆ ಕಳೆದರು ಎಂಬುದನ್ನು ತಿಳಿಯುವುದು ಹೆಚ್ಚು ಆಸಕ್ತಿದಾಯಕವಾಗಿದೆ. ಇವರ ಪ್ರಭಾವವು ಚಕ್ರವರ್ತಿಯ ಗಮನವನ್ನು ಹೆಚ್ಚು ಸೆಳೆಯುವ ಮತ್ತು ಅವರ ದಯೆಪರವಾಗಿರುವ ಕಾರ್ಯಗಳಿಂದಲೂ ಬೆಳೆಯಿತು. ಇದರಿಂದಾಗಿಯೇ ನೂರ್ ಜಹಾನ್ ಅವರು ಚಕ್ರವರ್ತಿಯ ನೆಚ್ಚಿನ ಮಡದಿಯಾಗಿ ಶೀಘ್ರದಲ್ಲೇ ಬಲಿಷ್ಠ ಶಕ್ತಿಯಾಗಿ ತನ್ನ ಪತಿಯೊಂದಿಗೆ ವಿಶಾಲವಾದ ಮೊಘಲ್ ಸಾಮ್ರಾಜ್ಯವನ್ನು ಆಳಿದವರು ಎಂಬುದು ತಿಳಿದುಬರುತ್ತದೆ. ಇವರು ಒಬ್ಬ ಚಾಣಾಕ್ಷ ರಾಜಕಾರಣಿ ಮತ್ತು ನಿಷ್ಠಾವಂತ ಪಾಲುದಾರರಾಗಿದ್ದರಿಂದ ಸಾಮ್ರಾಜ್ಯದ ನಾಣ್ಯಗಳು ಅವರ ಹೆಸರನಲ್ಲಿ ಮುದ್ರಿತಗೊಂಡು ಚಲಾವಣೆಯನ್ನು ಪಡೆದುಕೊಂಡಿದ್ದವು ಮತ್ತು ರಾಜಾದೇಶಗಳು ಅವರ ಸಹಿಯೊಂದಿಗೆ ಹೊರಡಿಸಲ್ಪಡುತ್ತಿದ್ದವು ಎಂಬುದು ಕೂಡ ಚರಿತ್ರೆಯಿಂದ ತಿಳಿದುಬರುತ್ತದೆ.

**ಪ್ರಧಾನ ಪದಗಳು** – ಮೆಹರುನ್ನಿಸಾ, ನೂರ್ ಜಹಾನ್, ಸಹಸಾರ್ವಭೌಮ ಅಧಿಕಾರ, ಕಲಾವಿದೆ, ಬೇಟೆಗಾರ್ತಿ, ಕವಿಯತ್ರಿ, ಕಲಾ ಪೋಷಕರು ಮತ್ತು ಜನಪರ ಸೇವೆ ಮನೋಭಾವನೆಯುಳ್ಳವರು.

[1]. ಮಕರಿ ಪೋಸ್ಟ್,ರಟ್ಟಿಹಳ್ಳಿ ತಾಲೂಕು,ಹಾವೇರಿ ಜಿಲ್ಲೆ.

**ಪ್ರಸ್ತಾವನೆ** – ನೂರ್ ಜಹಾನ್ ಅವರು ಸ್ವಯಂ ವ್ಯಕ್ತಿತ್ವದಲ್ಲಿ ಒಬ್ಬ ಸಂವೇದನಾಶೀಲ ಒಡನಾಡಿಯಾಗಿ, ಅತ್ಯುತ್ತಮ ಆರೈಕೆದಾರಳಾಗಿ, ಒಬ್ಬ ನಿಪುಣ ಸಲಹೆಗಾರಳಾಗಿ, ನುರಿತ ಬೇಟೆಗಾರ್ತಿಯಾಗಿ, ರಾಜತಾಂತ್ರಿಕ ಪರಿಣಿತಳಾಗಿ ಮತ್ತು ಕಲಾ ಪ್ರೇಮಿಯಾಗಿದ್ದರು ಎಂಬುದನ್ನು ಜಹಾಂಗೀರನ ಆತ್ಮಚರಿತ್ರೆಯು ಹೆಚ್ಚು ದೃಢೀಕರಿಸುತ್ತದೆ. ನೂರ್ ಜಹಾನ್ ಮತ್ತು ಜಹಾಂಗೀರ್ ಅವರು ಒಬ್ಬರಿಗೊಬ್ಬರು ಪೂರಕವಾಗಿ ಆಡಳಿತದಲ್ಲಿ ಕಾರ್ಯಚರಣೆಯನ್ನು ಮಾಡುವ ಮೂಲಕ ಪ್ರಸಿದ್ಧಿಯನ್ನು ಗಳಿಸಿದ್ದವರು. ಹಾಗೆಯೇ, ಚಕ್ರವರ್ತಿಯು ಸಹ ಸಾರ್ವಭೌಮಳಾಗಿ ಬೆಳೆಯುತ್ತಿರುವ ತನ್ನ ಮಡದಿಯ ಪ್ರಭಾವದಿಂದ ಎಂದಿಗೂ ಅನಾನುಕೂಲತೆಯನ್ನು ಅನುಭವಿಸಲಿಲ್ಲ ಎಂಬುದೂ ಕೂಡ ತಿಳಿದುಬರುತ್ತದೆ. ಹಾಗೆಯೇ, ಆಸ್ಥಾನದ ರಾಜಕೀಯದಲ್ಲಿ ತನ್ನ ಸಕ್ರಿಯ ಭಾಗವಹಿಸುವಿಕೆ ಮತ್ತು ಆಳವಾದ ಒಳಗೊಳ್ಳುವಿಕೆಯೊಂದಿಗೆ ನೂರ್ ಜಹಾನ್ ಅವರು ತನ್ನ ಪತಿಯ ಅಧಿಕಾರದಲ್ಲಿ ಹೆಚ್ಚು ಹೆಚ್ಚು ಪಾಲುದಾರರು ಎಂಬುದನ್ನು ಗುರುತಿಸಲಾಗಿದೆ. ಹಾಗಾಗಿಯೇ ಜಹಾಂಗೀರನ ಆಳ್ವಿಕೆಯಲ್ಲಿ ಸರಿಸುಮಾರು ಕ್ರಿ.ಶ.1617ರಲ್ಲಿ ಚಿನ್ನ ಮತ್ತು ಬೆಳ್ಳಿಯ ನಾಣ್ಯಗಳು ಮುದ್ರಿತಗೊಂಡಿದ್ದವು. ಆ ಮುದ್ರಿತ ನಾಣ್ಯಗಳ ಹಿಂಬದಿಯಲ್ಲಿ ಇದೇ ನೂರ್ ಜಹಾನ್ ಅವರ ಹೆಸರನ್ನು ಹೊಂದಿದ್ದವು. ಇದರಲ್ಲಿ ನೂರ್ ಜಹಾನ್ ಅವರು ಬೇಟೆ ಆಡುವುದು, ಸಾಮ್ರಾಜ್ಯಶಾಹಿ ಆದೇಶಗಳು ಮತ್ತು ನಾಣ್ಯಗಳನ್ನು ಹೊರಡಿಸುವುದು ಹಾಗೂ ಸಾರ್ವಜನಿಕ ಕಟ್ಟಡಗಳನ್ನು ವಿನ್ಯಾಸಗೊಳಿಸುವುದರ ಮೂಲಕ ಅಪಾರವಾಗಿಯೇ ಸ್ಫೂರ್ತಿದಾಯಕವಾದಂತಹ ಜೀವನ ನಡೆಸಿದವರು. ಜಹಾಂಗೀರ್ ಚಕ್ರವರ್ತಿಯು ಸೆರೆಯಲ್ಲಿದ್ದಾಗ ಅವರನ್ನು ರಕ್ಷಿಸಲು ಇದೇ ನೂರ್ ಜಹಾನ್ ಅವರ ಇಡೀ ಮೊಘಲರ ಸೈನ್ಯವನ್ನು ಮುನ್ನಡೆಸಿದವರು ಎಂಬುದು ತಿಳಿದುಬರುತ್ತದೆ. ಇದು ಮಹತ್ವಪೂರ್ಣವಾದಂತಹ ಒಂದು ಧೈರ್ಯಶಾಲಿ ಕಾರ್ಯವಾಗಿದ್ದು, ಆ ಮೂಲಕವಾಗಿಯೇ ಚರಿತ್ರೆಯ ಪುಟಗಳಲ್ಲಿ ನೂರ್ ಜಹಾನ್ ಅವರ ಹೆಸರನ್ನು ಅಮರವಾಗಿಸಿದೆ ಎಂಬುದನ್ನು ಇಂದಿಗೂ ಕಾಣಬಹುದು.

ನೂರ್ ಜಹಾನ್ ಅವರ ಆರಂಭಿಕ ಜೀವನ – ಕುಲೀನ ಮಿರ್ಜಾ ಗಯಾಸ್ ಬೇಗ್‌ನು ತನ್ನ ಅದೃಷ್ಟವನ್ನು ಹುಡುಕಿಕೊಂಡು ಭವ್ಯ ಮತ್ತು ಚಾರಿತ್ರಿಕ ಪರಂಪರೆಯುಳ್ಳ ಭಾರತಕ್ಕೆ ಬರುವ ಮಾರ್ಗದಲ್ಲಿ ಖಾಂದಹಾರ ಬಳಿ ಗಯಾಸ್ ಬೇಗ್‌ನ ಮಡದಿಯಾದ ಇಸ್ಮತುನ್ನಿಸಾ ಒಂದು ವೃಕ್ಷದ ಕೆಳಗೆ ಮೇ 31ನೆಯ 1577ರಂದು ಮೇರುನ್ನಿಸಾ ಎಂಬ ಒಂದು ಹೆಣ್ಣು ಮಗುವಿಗೆ ಜನ್ಮವನ್ನು ನೀಡಿದಳು. ಅದೇ ಹೆಣ್ಣು ಮಗು ಭಾರತೀಯ ಮೊಘಲ್ ಚರಿತ್ರೆಯಲ್ಲಿ ಮುಂದೆ ನೂರು ಮಹಲ್, ನೂರ್ ಜಹಾನ್ ಮತ್ತು ಬಾದಷ ಬೇಗಮ್ ಎಂಬ ಕೆಲವು ಬಿರುದಿನೊಂದಿಗೆ ಪ್ರಸಿದ್ಧಿ ಪಡೆದವರು. ಮಿರ್ಜಾ ಗಯಾಸ್ ಬೇಗಂನಿಗೆ ಭಾರತದಲ್ಲಿ ಅಕ್ಬರ್‌ನ ಆಶ್ರಯ ದೊರೆತ್ತಿದ್ದರಿಂದ ಮಿರ್ಜಾ ಗಯಾಸನ ಕುಟುಂಬ ರಾಜನ ಅರಮನೆಯಲ್ಲಿ ವಾಸವಾಗಿತ್ತು. ಮೆಹರುನ್ನಿಸಾಳಿಗೂ ಅರಮನೆಯ ರೀತಿ–ರಿವಾಜುಗಳನ್ನು ಕಲಿಸಲಾಯಿತು. ಅಷ್ಟೇ ಅಲ್ಲದೆ

ಇವಳು ಈಜು, ಕುದುರೆ ಸವಾರಿ, ಶಸ್ತ್ರ ವಿದ್ಯೆಯನ್ನು ಕಲಿತುಕೊಂಡಿದ್ದಳು. ಮೆಹರನ್ನಿ ಸಾಳಿಗೆ ಪರ್ಶಿಯನ್ ಮತ್ತು ಅರಬ್ಬಿ ಭಾಷೆಯಲ್ಲಿನ ಶಿಕ್ಷಣವನ್ನು ಸಹ ನೀಡಲಾಗಿತ್ತು. ಇದರ ಹೊರತಾಗಿ ಇವಳು ಕವಿತೆಗಳನ್ನು ಸಹ ಬರೆಯುತ್ತಿದ್ದಳು. ಒಂದು ವೇಳೆ ಜಹಾಂಗೀರ್ ಬಾದಷಾ ಮೆಹರುನಿಸಾಳನ್ನ ಮದುವೆಯಾಗಿ ಮಲ್ಲಿಕಾ ನೂರ್‌ಜಹಾನ್ ಎಂದು ಘೋಷಿಸದೆ ಹೋಗಿದ್ದರೆ ಮೆಹರುನ್ನಿಸಾ ಇತಿಹಾಸದ ಪುಟಗಳಲ್ಲಿ ಮರೆಯಾಗಿ ಹೋಗುತ್ತಿದ್ದಳು ಎಂಬುದು ತಿಳಿದುಬರುತ್ತದೆ.

ಮೆಹರುನ್ನಿಸಾಳು ಸರಿಸುಮಾರು ತನ್ನ 13 ಮತ್ತು 14ನೆಯ ವಯಸ್ಸಿನಲ್ಲಿಯೇ ಅರಮನೆಯ ರಾಜಕುಮಾರ ಸಲೀಂ (ಜಹಾಂಗೀರಿ)ನ ಭೇಟಿಯಾಗಿತ್ತು. ರಾಜಕುಮಾರ ಸಲಿಂ ಪಾರಿವಾಳಗಳನ್ನು ಭೇಟಿಯಾಡುವುದರಲ್ಲಿ ಆಸಕ್ತಿ ಉಳ್ಳವನಾಗಿದ್ದನು. ಈತ ಎರಡು ಪಾರಿವಾಳಗಳನ್ನು ಹಿಡಿದು ಮೆಹರುನ್ನಿಸಳಿಗೆ ಕೊಟ್ಟು ಅಲ್ಲೇ ಕಾಯುವಂತೆ ಹೇಳಿ ಮೂರನೆಯ ಪಾರಿವಾಳವನ್ನು ಹಿಡಿಯಲು ಹೊರಟು ಹೋದನು. ಈತ ಮರಳಿ ಬಂದಾಗ ಮೆಹರುನ್ನಿಸಾಳ ಬಳಿ ಇದ್ದ ಎರಡು ಪಾರಿವಾಳಗಳಲ್ಲಿ ಒಂದು ಪಾರಿವಾಳ ಹಾರಿ ಹೋಗಿತ್ತು. ಸಲೀಂ ಸಿಟ್ಟಿನಿಂದ ಪಾರಿವಾಳ ಹೇಗೆ ಹಾರಿ ಹೋಯಿತೆಂದು ಗದರಿಸಿದಾಗ ಮೆಹರುನ್ನಿಸಾ ತನ್ನ ಕೈಯಲ್ಲಿದ್ದ ಪಾರಿವಾಳವನ್ನು ಹಾರಿಬಿಟ್ಟು ಹೀಗೆ ಹಾರಿ ಹೋಯಿತೆಂದು ಉತ್ತರಿಸಿದಳು. ಮೆಹರುನ್ನಿಸಾಳ ಈ ಮುಗ್ಧತೆಯಿಂದ ಸಲೀಂ ಇವಳಲ್ಲಿ ಪ್ರೇಮಾ ಸಪ್ತನಾದನು. ಈ ವಿಷಯ ತಿಳಿದ ಅಕ್ಬರನು ಮಿರ್ಜಾ ಗಯಾಸ್ ತನ್ನ ಮಗಳ ಮೂಲಕ ರಾಜ್ಯವನ್ನು ಕಬಳಿಸುವ ಪ್ರಯತ್ನ ಮಾಡುತ್ತಿದ್ದನೆಂದು ಅನುಮಾನಿಸಿ ಮಿರ್ಜಾ ಗಯಾಸನ ಮನವೊಲಿಸಿ ತನ್ನ ಆಸ್ಥಾನದಲ್ಲಿದ್ದ ಇರಾನಿ ಅಲ್ಲಿಖುಲಿಯೊಡನೆ ಮೆಹರುನ್ನಿಸಾಳ ಮದುವೆ ಮಾಡಿಸಿ, ಅಲಿ ಖುಲಿಗೆ ಬಂಗಾಳದಲ್ಲಿ ಒಂದು ಜಹಾಂಗೀರನ್ನು ನೀಡಿ ಅಲಿಖುಲಿಯೊಡನೆ ಮೆಹರುನ್ನಿಸಾಳನ್ನು ಜಹಾಂಗೀರ್‌ಗೆ ಕಳಿಸಿಕೊಟ್ಟನು. ಸಲೀಂ ಜಹಾಂಗೀರನ ಹೆಸರಲ್ಲಿ ಮೊಘಲ್ ಸಿಂಹಾಸನವನ್ನು ಏರಲು ತಂದೆ ಅಕ್ಬರ್‌ನ ವಿರುದ್ಧ ದಂಗೆ ಎದ್ದಾಗ ಅಲಿಖುಲಿಯು ಜಹಾಂಗೀರನಿಗೆ ಬೆಂಬಲ ನೀಡಿರಲಿಲ್ಲ. ಸರಿಸಮಾರು ಕ್ರಿ.ಶ.1605ರಲ್ಲಿ ಜಹಾಂಗೀರ್‌ನು ಅಂತಿಮವಾಗಿ ಮೊಘಲ್ ಚಕ್ರವರ್ತಿ ಆದಾಗ ತನಗೆ ಮುಂದೆ ಒಂದು ದಿನ ಅಲಿಖುಲಿಯು ಸಮಸ್ಯೆ ಆಗಬಹುದೆಂದು ಭಾವಿಸಿ ತನ್ನ ಮಲ ಸಹೋದರ ಕುತ್ಬುದ್ದೀನ್ ನನ್ನ ಬಂಗಾಳ ಗವರ್ನರ್ ಆಗಿ ನೇಮಿಸಿ ಅಲಿಖುಲಿಯ ಜಹಾಂಗೀರ್‌ಗೆ ಕಳಿಸಿಕೊಟ್ಟನು. ಇವರಿಬ್ಬರ ನಡುವೆ ಮಾತಿನ ಸಮರವು ಏರ್ಪಟ್ಟಾಗ ಕುತ್ಬುದ್ದಿನ್‌ನ ಸೈನಿಕರು ಅಲಿಖುಲಿಯ ಶಿರಚ್ಚೇದನ ಮಾಡಿ ವಿಧವೆ ಮೆಹರುನ್ನಿಸಾ ಮತ್ತು ಅವಳ ಮಗಳು ಲಾಡಿಲಿ ಬೇಗಮ್‌ಳನ್ನು ಬಂಧಿಸಿ ಆಗ್ರಾಕ್ಕೆ ಕರೆ ತಂದರು. ಸತತ ಎರಡು ವರ್ಷಗಳವರೆಗೆ ಜಹಾಂಗೀರನನ್ನು ಮದುವೆಯಾಗುವಂತೆ ಮೆಹರುನ್ನಿಸಾಳ ಮನವಲಿಸಲಾಯಿತು. ಹೀಗೆ, ಸರಿಸುಮಾರು ಕ್ರಿ.ಶ.1611ರಲ್ಲಿ ಜಹಾಂಗೀರ್ ಮೆಹರುನಿಸಾಳನ್ನ ವಿವಾಹವಾಗಿ ರಾಣಿ ಮೆಹರುನ್ನಿಸಾಳಿಗೆ ನೂರ್ ಮಹಲ್, ನೂರ್ ಜಹಾನ್ ಎಂಬ ಬಿರುದನ್ನು ನೀಡಿದ್ದನು.

ನೂರ್ ಜಹಾನ್ ಅವರ ಬಲವರ್ಧನೆ – ನೂರ್‌ಜಹಾನ್ ಅವರು ಜಹಾಂಗೀರನು ನನ್ನ ವಿವಾಹವಾದ ಅನಂತರ ಪ್ರೀತಿ ಮತ್ತು ಜಾಣಮೆಯಿಂದ ಜಹಾಂಗೀರ್‌ನನ್ನು ಸಂಪೂರ್ಣವಾಗಿ ತನ್ನ ನಿಯಂತ್ರಣದಲ್ಲಿಟ್ಟುಕೊಂಡರು. ಅವರು ಬಾದಾಷ ಬೇಗಮ್ ಎಂದು ಸಹ ಕರೆಯಲ್ಪಟ್ಟರೂ ನಿಜವಾದ ಬಾದಷಾ ಅವರೆ ಆಗಿದ್ದವರು ಎಂಬುದು ಕಂಡುಬರುತ್ತದೆ. ತನ್ನ ಹೆಸರಿನಲ್ಲಿಯೇ ನಾಣ್ಯಗಳನ್ನು ಮುದ್ರಿಸುವ ಮೂಲಕ ಹೊರಡಿಸಿದವರು. ಜಹಾಂಗೀರನು ತನ್ನ ಅಧಿಕಾರವನ್ನು ಇದೇ ನೂರು ಜಹಾನ್ ಅವರಿಗೆ ಒಪ್ಪಿಸಿದ್ದೇನೆ. ನನಗೆ ಒಂದು ಸೇರು ಮದ್ಯ ಮತ್ತು ಅರ್ಧ ಸೇರು ಮಾಂಸವನ್ನು ಬಿಟ್ಟರೆ ಬೇರೇನೂ ಬೇಡ ಎಂದು ಸ್ವತಃ ಜಹಾಂಗೀರನೇ ಹೇಳಿಕೊಳ್ಳುತ್ತಿದ್ದ ಎಂಬುದು ಕೂಡ ತಿಳಿದುಬರುತ್ತದೆ. ಒಮ್ಮೆ ಹುಲಿ ಬೇಟೆಯ ಸಮಯದಲ್ಲಿ ಆನೆಯ ಮೇಲೆ ಕುಳಿತಿರುವಾಗ ಜಹಾಂಗೀರ್‌ನು ನಿದ್ದೆಗೆ ಜಾರಿದ್ದನು. ಆವಾಗ ತಕ್ಷಣ ಹುಲಿ ಒಂದು ಜಹಾಂಗೀರ್ ನಿದ್ದ ಆನೆಯ ಮೇಲೆ ಹಾರಿತು ಹುಲಿ ಜಹಾಂಗೀರನನ್ನು ಘಾಸಿಗೊಳಿಸುವ ಮೊದಲೇ ನೂರ್ ಜಹಾನ್ ಅವರು ಆ ಹುಲಿಯ ತಲೆಗೆ ಗುಂಡು ಹಾರಿಸಿ ಜಹಾಂಗೀರನನ್ನು ಪ್ರಾಣಪಾಯದಿಂದ ಪಾರು ಮಾಡಿದವರು ಎಂಬುದು ಚರಿತ್ರೆಯಲ್ಲಿ ದಾಖಲೀಕರಣಗೊಂಡಿರುತ್ತದೆ.

ನೂರ್‌ಜಹಾನ್ ಅವರು ಜಹಾಂಗೀರನ 2ನೆಯ ಮಗನಾದ ಶಹರಿಯಾರ್ ಎಂಬುವನೊಡನೆ ತನ್ನ ಮಗಳಾದ ಲಾಡಲಿ ಬೇಗಮಳ ವಿವಾಹ ಮಾಡಿದಳು. ಹಾಗೆಯೇ ತನ್ನ ಸಹೋದರ ಆಸೀಫ್ ಜಾನ್‌ನ ಮಗಳಾದ ಅರ್ಜುಮನ್ ಬಾನು ಎಂಬುವಳನ್ನು ವಿವಾಹವನ್ನು ಜಹಾಂಗೀರನ ಮತ್ತೊಬ್ಬ ಮಗ ರಾಜಕುಮಾರ ಖುರ್ರಂ (ಶಹಜಹಾನ್)ನೊಡನೆ ಮಾಡಿಸಿದ್ದಳು. ಇದೇ ಅರ್ಜುಮನ್ ಬಾನು ಮುಮ್ತಾಜ್ ಮಹಲ್ಳ ಎಂಬ ಹೆಸರಿನಿಂದಲೇ ಮುಂದೆ ಹೆಚ್ಚು ಪ್ರಸಿದ್ಧಿ ಪಡೆದಳು ಎಂಬುದು ತಿಳಿದುಬರುತ್ತದೆ.

ಜಹಾಂಗೀರನ ಸೇನಾ ನಾಯಕನಾಗಿದ್ದ ಮೊಹಬ್ಬತ್ ಖಾನ್ ಎಂಬುವನು ರಜಪೂತ ಸೈನಿಕದೊಡನೆ ಜೊತೆಗೂಡಿ ಜಹಾಂಗೀನನ್ನು ಬಂಧಿಸಿದ್ದನು. ಇವನನ್ನು ಸೋಲಿಸಲು ಆನೆಯ ಮೇಲೆ ಕುಳಿತ ನೂರ್ ಜಹಾನ್ ಸ್ವತಃ ಸೈನ್ಯ ಸಮೇತ ಹೊರಟಿರುವುದು ಕೂಡ ಕಂಡುಬರುತ್ತದೆ ಮೋಹಬತ್ ಖಾನ್‌ನ ಸೈನಿಕರು ಬಾಣಗಳ ಸುರಿಮಳೆಗೆರೆದಾಗ ನೂರ್ ಜಹಾನ್ ಅವರ ಸೈನಿಕರು ರಣರಂಗದಿಂದ ಪಲಾಯನಗೈದರು. ಆದರೂ ನೂರ್ ಜಹಾನ್ ಅವರು ಮರು ದಾಳಿಯನ್ನು ರೂಪಿಸುತ್ತಿರುವಾಗಲೇ ಮೊಹಬ್ಬತ್ ಖಾನ್‌ನು ನೂರ್ ಜಹಾನ್ ಅವರನ್ನು ಬಂಧಿಸಿದನು. ಬಂಧಿಯಾದ ನೂರ್ ಜಹಾನ್ ತನ್ನಲ್ಲಿದ್ದ ಬೆಲೆ ಬಾಳುವ ಆಭರಣಗಳನ್ನೆಲ್ಲ ಮಾರಿ ಗುಪ್ತ ರೀತಿಯಲ್ಲಿ ಆಫಾಘನ್ ಸೈನಿಕರನ್ನು ತನ್ನ ಸೇನೆಯಲ್ಲಿ ಭರ್ತಿ ಮಾಡಿಸಿಕೊಂಡಳು. ಲಾಹೋರ್‌ನಿಂದ ತನಗಾಗಿ 2000 ಸ್ಥಾಯಿ ಸೇನೆಯನ್ನೂ ಕರೆಸಿಕೊಂಡಳು. ಅಷ್ಟೇ ಅಲ್ಲದೆ ಮೊಹಬ್ಬತ್ ಖಾನನ ಅಧಿಕಾರಿಗಳನ್ನು ತನ್ನ ಪಕ್ಷಕ್ಕೆ ಸೇರಿಸಿಕೊಂಡಿದ್ದಳು.

ನೂರ್‌ಜಹಾನ್ ಅವರ ಎದುರು ತನ್ನ ನಿಷ್ಠಾವಂತ ಅಧಿಕಾರಿಗಳ ಸಂಖ್ಯೆ ಅತಿ ಕಡಿಮೆ ಎಂದು ಅರಿವಾದೊಡನೆ ಮೊಹಬತ್ ಖಾನ್ ಅಲ್ಲಿಂದ ಜೀವ ಉಳಿಸಿಕೊಂಡು ಫಲಾಯನ ಗೈದು ದಖ್ಖನ್‌ನಲ್ಲಿ ರಾಜಕುಮಾರ ಖುರಂನ ಆಶ್ರಯ ಪಡೆದು ನೂರ್‌ಜಹಾನ್ ವಿರುದ್ಧ ಬಂಡಾಯವೇಳಲು ಖುರಂ ನೋಡನೆ ಸಂಚುರೂಪಿಸತೊಡಗಿದನು. ಇತ್ತ ನೂರ್‌ಜಹಾನ್ ಅವರು ಜಹಾಂಗೀರನನ್ನು ಮೊಹಬ್ಬತ್ ಖಾನ್‌ನ ಅಪಾಯದಿಂದ ಪಾರು ಮಾಡಿದಳು. ಈ ಘಟನೆ ನಡೆದು ಕೆಲ ದಿನಗಳಲ್ಲೇ ಸರಿಸುಮಾರು ಕ್ರಿ.ಶ. 1627ರಲ್ಲಿ ಜಹಾಂಗೀರನ ಮರಣವಾಯಿತು. ನೂರ್‌ಜಹಾನ್ ಅವರಿಗೆ ಜಹಾಂಗೀರ್‌ನಿಂದ ಯಾವುದೇ ಸಂತಾನವಾಗಿರಲಿಲ್ಲ. ಹಾಗಾಗಿ ನೂರ್‌ಜಹಾನ್ ತನ್ನ ಅಳಿಯ ಮಗಳು ಲಾಡಲಿ ಬೇಗಂಳ ಪತಿಯಾದ ಶಹರಿಯಾರನ್ನು ಸಿಂಹಾಸನಕ್ಕೆ ತರಲತ್ನಿಸಿದಳು. ಆದರೆ ನೂರ್‌ಜಹಾನ್ ಅವರ ಸಹೋದರ ಆಸೀಫ್ ಜಾ ತನ್ನ ಅಳಿಯ ಕುರ್ರಂ( ಷಹಜಹಾನ)ನ ಪಕ್ಷವಹಿಸಿ ನೂರ್‌ಜಹಾನ್ ಅವರನ್ನು ಬಂಧಿಸಿದನು. ಇದರ ಮಧ್ಯೆಯೂ ನೂರ್‌ಜಹಾನ್ ಅವರ ಅಳಿಯ ಶಹರಿಯಾರ್ ತನ್ನನ್ನು ಮೊಘಲ್ ರಾಜ ಎಂದು ಘೋಷಿಸಿಕೊಂಡನು. ಆಸಿಫ್ ಜಾನು ಲಾಹೋರ್ ಬಳಿ ಶಹರಿಯಾರನ್ನು ಯುದ್ಧದಲ್ಲಿ ಸೋಲಿಸಿ ಬಂಧನದಲ್ಲಿರಿಸಿದನು. ಆಗ ಖುರಂ ಶಹಜಹಾನ್ ಎಂಬ ಹೆಸರಿನಿಂದ ಮೊಘಲ್ ಸಿಂಹಾಸನವೇರಿದ ತಕ್ಷಣ ಶಹರಿಯಾರ್‌ನ್ನು ಕೊಲ್ಲಿಸಿದನು. ಷಾಜಹಾನ್‌ನು ನೂರ್ ಜಹಾನ್ ಅವರನ್ನು ಬಂಧನದಿಂದ ಮುಕ್ತಗೊಳಿಸಿ, ಆ ಮೂಲಕವಾಗಿ ವಾರ್ಷಿಕ ಎರಡು ಲಕ್ಷ ರೂಪಾಯಿಗಳ ನಿವೃತ್ತಿ ವೇತನವನ್ನು ನೂರ್‌ಜಹಾನ್ ಅವರಿಗೆ ನೀಡುವುದಾಗಿ ಘೋಷಿಸಿ ಅವರನ್ನು ಲಾಹೋರ್‌ಗೆ ಕಳಿಸಿಕೊಡಲಾಯಿತು ಎಂಬುದು ಕಂಡುಬರುತ್ತದೆ.

ಕಲಾ ಪೋಷಣೆ – ನೂರ್ ಜಹಾನ್ ಅವರು ಪರ್ಷಿಯನ್ ಭಾಷೆಯಲ್ಲಿ ಚಿಂತನಾಶೀಲ ಕಾವ್ಯಗಳನ್ನು ರಚಿಸುತ್ತಿದ್ದವರು. ಇವರು ಕಾವ್ಯ ರಚನೆಯಲ್ಲಿ ಅವಲಂಬನೆ, ರೋಧನೆ ಮತ್ತು ಸೂಫಿ ಭಾವನೆಗಳು ಅವರ ಪದ್ಯಗಳನ್ನು ಉನ್ನತ ಮಟ್ಟಕ್ಕೆ ತಲುಪಿಸಿದ್ದವು. ಪರ್ಷಿಯನ್ ಭಾಷಾ ಸಾಹಿತ್ಯದಲ್ಲಿ ಪಾರಂಗತರಾದಂತಹ ಇವರು ಜಗಮಗಿಸುವ ಮತ್ತು ಸರಾಗವಾದ ಪದ್ಯಗಳನ್ನು ರಚಿಸುತ್ತಿದ್ದವರು. ನೂರ್‌ಜಹಾನ್ ಅವರ ಆಸ್ಥಾನದಲ್ಲಿ ಕಾವ್ಯನಾತ್ಮಕ ಸ್ಪರ್ಧೆಗಳನ್ನು ಆಯೋಜಿಸುತ್ತಿದ್ದರು. ನೂರ್‌ಜಹಾನ್ ಅವರು ಕೌಶಲ್ಯ ಪೂರ್ಣ ಉಡುಪುಗಳ ಹೊಸ ಮಾದರಿಗಳನ್ನು ವಿನ್ಯಾಸಗೊಳಿಸಿದವರು. ಮದುವೆ ಸಮಾರಂಭಗಳಿಗೆ ನೂರ್ ಮಹಲಿ ಎಂಬ ದುಬಾರಿ ಎಲ್ಲದ ಉಡುಪುಗಳನ್ನು ಸಾಮಾನ್ಯ ಬಡಜನರಿಗೆ ಕೈಗೆಟುಕುವ ದರದಲ್ಲಿ ವಿನ್ಯಾಸಗೊಳಿಸಿದ್ದವರು. ಇವರ ನಿರ್ದೇಶನದಲ್ಲಿ ಸರಾಯಿ ಮತ್ತು ಉದ್ಯಾನವನಗಳನ್ನು ನಿರ್ಮಿಸಲಾಯಿತು. ಹೀಗೆ, ನಿರ್ಮಿಸಿದ ತನ್ನ ತಂದೆಯ ಈತಮದ್ – ಉದ್ – ದೌಲನ ಸಮಾಧಿ ಕಟ್ಟಡವು ಅಮೃತಶಿಲೆಯ ಸೊಗಸಾದ ಕಲಾ ಕೃತಿಯಾಗಿದೆ. ಇಲ್ಲಿ ಬಳಸಿದ

ನೂರ್‌ಜಹಾನ್ ಅವರಿಂದ ಪರಿಚಯಿಸಲ್ಪಟ್ಟ ಫರ್ಷ್ –ಎ– ಚಾಂದಿನಿ (ಬಳಿ ನೆಲದ ಹಾಸು) ಎಂಬ ಶ್ರೀಗಂಧದ ಕಾರ್ಪೆಟ್ ಹೆಚ್ಚು ಪ್ರಸಿದ್ಧವಾಯಿತು.

ನೂರ್‌ಜಹಾನ ಅವರು ರಾಜ ಕಟ್ಟಡಗಳಲ್ಲಿ ಬಳಸಲಾಗುವ ಪೀಠೋಪಕರಣಗಳ ಗುಣಮಟ್ಟ ಮತ್ತು ಹೊಸ ರಾಜ್ಯ ವೈಭವವನ್ನು ಉನ್ನತೀಕರಿಸುವ ಮೂಲಕ ಚಕ್ರವರ್ತಿ ಆಸ್ಥಾನದ ವೈಭವವನ್ನು ಹೆಚ್ಚಿಸಿದವರು. ಕಟ್ಟಡಗಳ ಮೇಲ್ಛಾವಣಿಗಳನ್ನು ಅಮೃತ ಶಿಲೆಗಳ ಮೊಸಾಯಿಕ್ ಕೆತ್ತನೆಯಿಂದ ಅಲಂಕರಿಸಿದರು. ನೂರ್‌ಜಹಾನ್ ಅವರು ಔತಣ ಕೂಟಗಳನ್ನು ಏರ್ಪಡಿಸಿ ಅತಿಥಿಗಳನ್ನು ಸತ್ಕರಿಸುವ ಹೊಸ ವಿಧಾನವನ್ನು ಕಂಡುಕೊಂಡವರು. ಔತಣ ಕೂಟಗಳನ್ನು ಏರ್ಪಡಿಸುವ ಅವರ ಸಾಮರ್ಥ್ಯವನ್ನು ಬಹಳವಾಗಿ ಮೆಚ್ಚಿದೆ ಎಂದು ಜಹಾಂಗೀರ್ ತನ್ನ ಆತ್ಮಚರಿತ್ರೆಯಲ್ಲಿ ಈ ಎಲ್ಲಾ ಮಾದರಿಯ ವಿಷಯಗಳನ್ನು ಸಹ ಉಲ್ಲೇಖಿಸಿರುತ್ತಾನೆ ಎಂಬುದು ತಿಳಿದುಬರುತ್ತದೆ.

ನೂರ್‌ಜಹಾನ್ ಅವರ ಒಟ್ಟಾರೆಯಾ ಜೀವನದಲ್ಲಿ ಸರಿಸುಮಾರು 18 ವರ್ಷಗಳನ್ನು ಲಾಹೋರಲ್ಲಿ ಕಳೆದರು. ಹಾಗೆಯೇ ತಮ್ಮ ಉಸ್ತುವಾರಿಯಲ್ಲಿ ಜಹಾಂಗೀರನ ಗೋರಿಯನ್ನು ಸಹ ನಿರ್ಮಿಸಿದವರು. ಡಿಸೆಂಬರ್ 17ನೆಯ 1645 ರಂದು ತಮ್ಮ 68ನೆಯ ವಯಸ್ಸಿನಲ್ಲಿ ನೂರ್‌ಜಹಾನ್ ಅವರು ನಿಧನ ಹೊಂದಿದರು. ಇವರು ತನ್ನ ಜೀವಿತಾವಧಿಯಲ್ಲೇ ಇರಾನಿನಿಂದ ತನ್ನ ಶವಕ್ಕೆ ಹೋದಿಸುವ ಕಫನ್ ಬಟ್ಟೆಯನ್ನು ತರಿಸಿ ಅದರ ಮೇಲೆ ಖುರಾನಿನ ಶ್ಲೋಕಗಳನ್ನು ಬರೆಸಲಾಗಿತ್ತು. ಅದನ್ನು ಮೆಕ್ಕಾಕ್ಕೆ ಕಳುಹಿಸಿ ಆಬ್ – ಎ – ಜಮ್ ಜಮ್ ಎಂಬ ಪವಿತ್ರ ನೀರಿನಿಂದ ಶುಚಿ ಗೋಳಿಸಲಾಗಿತ್ತು. ನೂರುಜಹಾನ್ ಅವರ ಅಂತ್ಯ ಸಂಸ್ಕಾರಕ್ಕೆ ಸರಿಸುಮಾರು 60 ಸಾವಿರ ಜನರು ನೆರೆದಿದ್ದರೂ ಇದರಲ್ಲಿ ನೂರ್‌ಜಹಾನ್ ಅವರಿಂದ ಸಹಾಯ ಪಡೆದ ಬಹುತೇಕ ಸಾಮಾನ್ಯ ಜನರು ಮತ್ತು ಬಡಜನರಿದ್ದರು ಎಂಬುದನ್ನು ಗುರುತಿಸಬಹುದು. ಅನಾಥ ಮಕ್ಕಳು ಇವರ ಶವವನ್ನು ಸುತ್ತುವರೆದಿದ್ದರೂ ಸಹ ಜನರೆಲ್ಲರೂ ಶೋಕದಲ್ಲಿ ಮುಳಿಗಿದ್ದರು. ನೂರ್‌ಜಹಾನ್ ಅವರ ಶವವನ್ನು ಜಹಾಂಗೀರನ ಗೋರಿ ಕಟ್ಟಡದಲ್ಲೇ ಸಮಾಧಿ ಮಾಡಲಾಗಿರುತ್ತದೆ.

ಉಪಸಂಹಾರ – ಒಟ್ಟಾರೆಯಾಗಿ ಭಾರತೀಯ ರಾಜಕೀಯ ಚರಿತ್ರೆಯ ಸಂದರ್ಭದಲ್ಲಿ ನೂರ್‌ಜಹಾನ್ ಅವರನ್ನು ಸರಿಸುಮಾರು ಕ್ರಿ.ಶ. 17ನೆಯ ಶತಮಾನದ ಚಕ್ರವರ್ತಿ ಜಹಾಂಗೀರ್‌ನ ಮಹಾನ್ ಪ್ರಣಯ ಸಖಿ ಎಂದು ತಿಳಿದಿದ್ದಾರೆ. ಆದರೆ, ರಾಜ ಮನೆತನದ ಮಹಿಳೆಯರು ಜನಾನಗಳಲ್ಲಿ ಸೇರಿದ್ದ ಸಮಯದಲ್ಲಿ ತನ್ನ ಪತಿಯೊಂದಿಗೆ ಬಹಿರಂಗವಾಗಿ ಆಡಳಿತ ನಡೆಸುವ ಮೂಲಕ ಮಾನದಂಡಗಳನ್ನು ಧಿಕ್ಕರಿಸಿದವಳು. ಭೇಟಿಯಾಡುವುದು, ಸಲಹೆ ನೀಡುವುದು, ಚಕ್ರಾಧಿಪತ್ಯದ ಆದೇಶಗಳನ್ನು ಮತ್ತು ನಾಣ್ಯಗಳನ್ನು ಹೊರಡಿಸುವುದು ಮತ್ತು ಕಟ್ಟಡಗಳನ್ನು ವಿನ್ಯಾಸಗೊಳಿಸುವುದರ ಮೂಲಕ ಅವರು ತನ್ನ ಹೆಸರನ್ನು ಸಾರ್ವಜನಿಕರ ಸ್ಮರಣೆಯಲ್ಲಿ ಮತ್ತು ಇತಿಹಾಸದಲ್ಲಿ ಅಳಿಸಲಾಗದಂತೆ ಹಚ್ಚುತ್ತಿದ್ದಾರೆ.

ನೂರ್‌ಜಹಾನ್ ಅವರು ಬರೀ ಆಡಳಿತಗಾರರು ಮಾತ್ರವಲ್ಲದೇ ಕವಿತೆ, ಕಲೆ ಮತ್ತು ಕ್ಯಾಲಿಗ್ರಫಿಯಲ್ಲಿ ಹೆಚ್ಚಿನ ಆಸಕ್ತಿಯನ್ನು ಉಳ್ಳವಳಾಗಿರುವುದರ ಜೊತೆಗೆ ಜನಪ್ರಿಯ ಆಡಳಿತವನ್ನು ನಡೆಸಿ ರಾಜ್ಯದಲ್ಲಿ ಬಂಡಾಯಗಳನ್ನು ತಡೆಗಟ್ಟಿ ಸಾಮ್ರಾಜ್ಯದ ಸಮಗ್ರತೆಯನ್ನು ಕಾಪಾಡಿದವರು ಎಂಬುದು ಭಾರತೀಯ ಚರಿತ್ರೆಯಲ್ಲಿ ಮುಸ್ಲಿಂ ಮಹಿಳೆಯೊಬ್ಬರು ಸಾಧಿಸಿದ್ದಂತಹ ಸಾಧನೆಯೂ ಅಪಾರವಾಗಿರುತ್ತದೆ.

## ಆಧಾರ ಗ್ರಂಥಗಳು


- Munshi,Syed Amjad Ali Saheb ashari, ***Noor Jahan Badshah Begum ki Savanah Umri.***1903
- Akbarabadi, Seemab, ***Savanah Noor Jahan Begum***. 1920
- Chakrabarty, Paromita, ***Aura and enigma of Noor Jahan***, 2016
- Chandra pant, ***Noor Jahan and her family***, Allahabad, 1978
- Wheeler M. Thackston, ***The Jahangir Nama, memories of Jahangir***, New York,1999
- ಡಾ.ಸುಬ್ಬರಾವ್, ವಿಜಯ, ***ನೂರ್ ಜಹಾನ್– ಐತಿಹಾಸಿಕ ಕಾದಂಬರಿ***